ನಂ.ನಸತು:ದಾಸ್ತಾನು::ಸಿಆರ್/1/2007–08

ನಗರಸಭಾ ಕಾರ್ಯಾಲಯ
ತುಮಕೂರು
ದಿನಾಂಕ 09–05–2007

# ಟೆಂಡರ್ ಪ್ರಕಟಣೆ

2007–08ನೇ ಸಾಲಿಗೆ ತುಮಕೂರು ನಗರಸಭೆಯ ದಾಸ್ತಾನು ಶಾಖೆಗೆ ಈ ಕೆಳಕಂಡ ಸಾಮಗ್ರಿಗಳನ್ನು ಸರಬರಾಜು ಮಾಡಿಕೊಳ್ಳಲು ಅಧಿಕೃತ ತಯಾರಕರಿಂದ ಹಾಗೂ ಅಧಿಕೃತ ಮಾರಾಟಗಾರರಿಂದ ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂ ಬೆಲೆಯೊಂದಿಗೆ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕ 28–05–2007 ರಿಂದ 28–6–2007ರವರೆಗೆ ಕಛೇರಿ ವೇಳೆಯಲ್ಲಿ ಅರ್ಜಿ ಶುಲ್ಕವನ್ನು ಪಾವತಿ ಮಾಡಿ ಅರ್ಜಿಯೊಂದಿಗೆ ಲಗತ್ತಿಸಿ ಪೌರಾಯುಕ್ತರು, ನಗರಸಭೆ, ತುಮಕೂರು ರವರಿಗೆ ಸಲ್ಲಿಸಬಹುದಾಗಿದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.
2. ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ 28–05–2007 ರಿಂದ 28–6–2007ರವರೆಗೆ ಕಛೇರಿಯ ವೇಳೆಯಲ್ಲಿ ಅರ್ಹ ಟೆಂಡರ್‌ದಾರರಿಗೆ ಟೆಂಡರ್ ಫಾರಂ ನೀಡಲಾಗುವುದು.
3. ಭರ್ತಿ ಮಾಡಿದ ಫಾರಂಗಳನ್ನು ದಿನಾಂಕ 30–06–2007 ರಂದು 4.30 ಗಂಟೆಯೊಳಗಾಗಿ ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಬಹುದಾಗಿದೆ.
4. ಟೆಂಡರ್ ಫಾರಂಗಳನ್ನು ಸಾಧ್ಯವಾದರೆ ಅದೇ ದಿನಾಂಕ 30–06–2007 ರಂದು ಸಂಜೆ 4.00 ಗಂಟೆಯೊಳಗಾಗಿ ಅಥವಾ ಮುಂದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| ಕ್ರ.ಸಂ. | ಸಾಮಗ್ರಿಗಳ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ | ಟೆಂಡರ್ ಫಾರಂ ಬೆಲೆ ಹಿಂದಿರುಗಿಸಲಾ ಗುವುದಿಲ್ಲ | ಟೆಂಡರ್ ಫಾರಂ ಗಾಗಿ ಅರ್ಜಿ ಸಲ್ಲಿಸುವ ದಿನಾಂಕ | ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ | ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆ ದಿನಾಂಕ | ಟೆಂಡರ್ ಕಾಲಾವಧಿ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ನೀರು ಸರಬರಾಜು ವಿಭಾಗಕ್ಕೆ ಬೇಕಾಗುವ ಜಿ.ಐ. ಪೈಪ್ ಮತ್ತು ಪಿವಿಸಿ ಸಾಮಗ್ರಿಗಳು ಪಿವಿಸಿ ಪೈಪ್‌ಗಳು, 6 ಕೆಜಿ ಒತ್ತಡವುಳ್ಳ ದಾಗಿರತಕ್ಕದ್ದು ಐಎಸ್‌ಐ ಗುಣಮಟ್ಟ ಹೊಂದಿರತಕ್ಕದ್ದು. ಜಿ.ಐ. ಪೈಪ್‌ಗಳು ಸಿ ಕ್ಲಾಸ್ ಇರತಕ್ಕದ್ದು. ಐಎಸ್‌ಐ ಗುಣಮಟ್ಟ ಹೊಂದಿರತಕ್ಕದ್ದು. ವಾಲ್‌ಸಾಕೇಟ್‌ಗಳು ಮತ್ತು ಇತರೆ ಸಾಮಗ್ರಿಗಳು ಐಎಸ್‌ಐ ಗುಣಮಟ್ಟ ಹೊಂದಿರತಕ್ಕದ್ದು. | 30.00 | 30000.00 | 500+ ತೆರಿಗೆ | 28–05–2007 ರಿಂದ 28–6–2007 | 28–5–07 ರಿಂದ 28–6–07 | 30–6–2007 | 31–3–2008 |

| | | | | | | | | |
|---|---|---|---|---|---|---|---|---|
| 2 | ಪಂಪು ಮೋಟಾರ್‌ಗಳು 5 ಹೆಚ್.ಪಿ. ಯಿಂದ 15 ಹೆಚ್.ಪಿ. ಸಬ್ ಮರ್ಷಿಬಲ್ ಪಂಪ್ ಮತ್ತು ಮೋಟಾರ್ ಯು.ಜಿ.ಕೇಬಲ್ ಪ್ಲಾಟ್ ಕೇಬಲ್, ಪ್ಯಾನಲ್ ಬೋರ್ಡ್, ಪಂಪು ಮೋಟಾರ್ ಆಟ್ಲಾಂಟ, ಟೆಕ್ಸ್‌ಮೋ ಹಾಗೂ ಐಎಸ್‌ಐ ಪಂಪು ಮೋಟಾರ್‌ಗಳು<br>ಪ್ಲಾಟ್ ಕೇಬಲ್‌ಗಳು, ಫಿನಲೆಕ್ಸ್ ಮೇಕೋ ಹೊಂದಿರತಕ್ಕದ್ದು.<br>ಪ್ಯಾನಲ್ ಬೋರ್ಡ್ ಮೇಕೋ ಟೆಪ್ ಪ್ಯಾನಲ್ ಬೋರ್ಡ್ ಹೊಂದಿರತಕ್ಕದ್ದು. | 30.00 | 30000.00 | 500+ ತೆರಿಗೆ | 28-05-2007 ರಿಂದ 28-6-2007 | 28-5-07 ರಿಂದ 28-6-07 | 30-6-2007 | 31-3-2008 |
| 3 | ಸ್ವಚ್ಛತಾ ಸಾಮಗ್ರಿಗಳ ಗುದ್ದಲಿ, ಮುಳ್ಳುಗುದ್ದಲಿ, ಪಿಕಾಸಿ, ಆರೆ ಕೋಲು, ದೊಡ್ಡ ಮಂಕರಿ, ಚಿಕ್ಕ ಮಂಕರಿ, ಗೋರೆಗಳು, ಪರಿಕೆ ಕಡ್ಡಿ, ಕೈಗಾಡಿಗಳು ಇತ್ಯಾದಿ | 8.00 | 16000.00 | 500+ ತೆರಿಗೆ | 28-05-2007 ರಿಂದ 28-6-2007 | 28-5-07 ರಿಂದ 28-6-07 | 30-6-2007 | 31-3-2008 |
| 4 | ಅಲ್ಯೂಮಿನಿಯಂ, ಸಲ್ಫೇಡ್ ಆಫ್ ಪೇರಿಕಲ್ ಸ್ಪಟಿಕ (ಆಲಂ) ಪ್ಯಾನಾಯಿಲ್ ಮತ್ತು ಬ್ಲೀಚಿಂಗ್ ಪೌಡರ್ ಲಾರ್ವೆ ಸ್ಪೆಡ್ ಬೈಟೆಕ್ಸ್ | 9.00 | 18000.00 | 500+ ತೆರಿಗೆ | 28-05-2007 ರಿಂದ 28-6-2007 | 28-5-07 ರಿಂದ 28-6-07 | 30-6-2007 | 31-3-2008 |
| 5 | ಕಛೇರಿಗೆ ಬೇಕಾದ ನಮೂನೆ ಫಾರಂ, ಟೆಂಡರ್ ಫಾರಂ, ಅಸೆಸ್‌ಮೆಂಟ್ ರಿಜಿಸ್ಟರ್ ಡಿಮಾಂಡ್ ರಿಜಿಸ್ಟರ್ ಇತ್ಯಾದಿಗಳನ್ನು ಮುದ್ರಿಸಿ ಸರಬರಾಜು ಮಾಡುವುದು. | 10.00 | 20000 | 500+ ತೆರಿಗೆ | 28-05-2007 ರಿಂದ 28-6-2007 | 28-5-07 ರಿಂದ 28-6-07 | 30-6-2007 | 31-3-2008 |
| 6 | ಆರ್.ಸಿ.ಸಿ. ಸ್ಪನ್ ಕಾಂಕ್ರೀಟ್ ಪೈಪ್ | 8.00 | 16000.00 | 500+ ತೆರಿಗೆ | 28-05-2007 ರಿಂದ 28-6-2007 | 28-5-07 ರಿಂದ 28-6-07 | 30-6-2007 | 31-3-2008 |
| 7 | ಟ್ಯೂಬುಲೈಟ್ ಮತ್ತು ಸೋಡಿಯಂ ಪಿಟ್ಟಿಂಗ್ ಬೆಂಡ್, ಕ್ಲಾಂಪ್, ಬೋಲ್ಟ್‌ನೆಟ್ ಸೇರಿ ಬಜಾಜ್ ಕಂಪನಿ, ಫಿಲಿಪ್ಸ್ ಕಂಪನಿ, ಕ್ರಾಂಪ್ಟನ್ ಕಂಪನಿ ಐಎಸ್‌ಐ ಗುಣಮಟ್ಟ ಹೊಂದಿರತಕ್ಕದ್ದು. | 30.00 | 30000.00 | 500+ ತೆರಿಗೆ | 28-05-2007 ರಿಂದ 28-6-2007 | 28-5-07 ರಿಂದ 28-6-07 | 30-6-2007 | 31-3-2008 |

| | | | | | | | | |
|---|---|---|---|---|---|---|---|---|
| 8 | ನಗರಸಭೆಯ ವಾಹನಗಳಿಗೆ ಟೈರ್ ಮತ್ತು ಟ್ಯೂಬ್‌ಗಳು, ಬ್ಯಾಟರಿ | 5.00 | 10000 | 500+ ತೆರಿಗೆ | 28-05-2007 ರಿಂದ 28-6-2007 | 28-5-07 ರಿಂದ 28-6-07 | 30-6-2007 | 31-3-2008 |

## ಷರತ್ತುಗಳು

1. ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವುದು ಮತ್ತು ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ನಗರಸಭೆ ಪೌರಾಯುಕ್ತರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವುದು.
2. ಸಾಮಗ್ರಿಗಳ ದರವನ್ನು ನಮೂದಿಸುವಾಗ ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು.
3. ದರವನ್ನು ಅರ್ಜಿಯಲ್ಲಿ ನಮೂದಿಸುವಾಗ ಅಂಕಿ ಮತ್ತು ಆಕ್ಷರಗಳಲ್ಲಿರಬೇಕು ಹಾಗೂ ತಿದ್ದಿರಬಾರದು.
4. ಠೇವಣಿ ಇಲ್ಲದೆ ಟೆಂಡರನ್ನು ಗಮವಕ್ಕೆ ತೆಗೆದುಕೊಳ್ಳುವುದಿಲ್ಲ.
5. ಠೇವಣಿ ಹಣಕ್ಕೆ ಯಾವುದೇ ವಿಧವಾದ ಬಡ್ಡಿ ಪಾವತಿಸುವುದಿಲ್ಲ.
6. ಟೆಂಡರ್ ಸ್ವೀಕರಿಸುವ ಅಥವಾ ತೀರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಸರಬರಾಜು ಮಾಡುವ ಸಾಮಗ್ರಿಗಳನ್ನು ಸ್ವಂತ ಖರ್ಚಿನಿಂದ ದಾಸ್ತಾನು ಶಾಖೆಗೆ ಸರಬರಾಜು ಮಾಡತಕ್ಕದ್ದು.
8. ಟೆಂಡರ್‌ದಾರರು ಡಿಡಿ ಅಥವಾ ಕಾರ್ಯಾಲಯದಲ್ಲಿ ಹಣ ಕಟ್ಟಿದ ರಸೀದಿ ಪಡೆದು ಟೆಂಡರ್ ಫಾರಂನಲ್ಲಿ ಲಗತ್ತಿಸತಕ್ಕದ್ದು.
9. ಟೆಂಡರನ್ನು ಅದೇ ದಿನ ಅಥವಾ ಸರ್ಕಾರಿ ರಜಾದಿನ ಹೊರತುಪಡಿಸಿ ಪೌರಾಯುಕ್ತರ ಕಾರ್ಯಾಲಯದಲ್ಲಿ ತೆರೆಯಲಾಗುವುದು.
10. ಸರಬಖಆಜುದಾರರ ಮಾರಾಟ ತೆರಿಗೆ ಇಲಾಖೆಯ ನೊಂದಾವಣೆದಾರರಾಗಿರಬೇಕು. ನೊಂದಾವಣೆ ಪತ್ರ ಲಗತ್ತಿಸಲಕ್ಕದ್ದು.
11. ಪಿವಿಸಿ ಪೈಪ್ ಮತ್ತು ಪಿ.ಐ. ಪೈಪ್ ಸಾಮಗ್ರಿಗಳು, ಐ.ಎಸ್.ಓ. ಗುಣಮಟ್ಟ ಹೊಂದಿದ್ದು 6 ಕೆ.ಜಿ. ಒತ್ತಡವುಳ್ಳದ್ದಾಗಿರಬೇಕು.
12. ಪಂಪ್ ಮತ್ತು ಮೋಟಾರ್ ಸಾಮಗ್ರಿಗಳು ಐ.ಎಸ್.ಓ ಗುಣಮಟ್ಟ ಹೊಂದಿರತಕ್ಕದ್ದು. ಹಾಗೂ ಐ.ಎಸ್.ಓ. ಪ್ರಮಾಣ ಪತ್ರ ಲಗತ್ತಿಸತಕ್ಕದ್ದು.
13. ಸಾಮಗ್ರಿಗಳನ್ನು ಸರಬರಾಜು ಆದೇಶ ನೀಡಿದ 15 ದಿನದೊಳಗಾಗಿ ಸರಬರಾಜು ಮಾಡತಕ್ಕದ್ದು.
14. ಆಲಂ ಮತ್ತು ಬ್ಲಿಚಿಂಗ್ ಪೌಡರ್ ಪ್ಯಾನಾಯಿಲ್‌ಗಳಿಗೆ ಸಂಬಂಧಪಟ್ಟ ಇಲಾಖೆಯಿಂದ ಸಾಮಗ್ರಿಗಳ ದೃಢೀಕರಣ ಪತ್ರ ಲಗತ್ತಿಸಲಕ್ಕದ್ದು.
15. ಸಾಮಗ್ರಿಗಳ ಗುಣಮಟ್ಟದ ಬಗ್ಗೆ ಮೂರನೇ ಪಾರ್ಟಿಯವರಿಂದ (ಎಸ್.ಜಿ.ಎಸ್. ಅಂಡ್ ಡಿ.ಜಿ.ಎಸ್.ಎನ್.ಡಿ) ರವರಿಂದ ಸರ್ಟಿಫಿಕೇಟ್ ಲಗತ್ತಿಸತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಟೆಂಡರ್‌ದಾರರೇ ಭರಿಸತಕ್ಕದ್ದು.
16. ಠೇವಣಿಯನ್ನು ಸಲ್ಲಿಸದ ಹಾಗೂ ಅವಧಿಮೀರಿ ಬಂದಂತಹ ಮತ್ತು ನಿಬಂಧನೆಗಳನ್ನು ವಿಧಿಸಿ ಸಲ್ಲಿಸುವ ಟೆಂಡರ್‌ಗಳನ್ನು ಅಂಗೀಕರಿಸುವುದಿಲ್ಲ.
17. ಟೆಂಡರ್ ಫಾರಂ ದ್ವಿಪ್ರತಿಯಲ್ಲಿದ್ದು 1ನೇ ಟೆಂಡರ್ ಫಾರಂನಲ್ಲಿ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು. ಮೊದಲು ದಾಖಲಾತಿಗಳ ಟೆಂಡರನ್ನು ತೆರೆದು ದಾಖಲಾತಿಗಳು ಸರಿಯಿದ್ದಲ್ಲಿ ಎರಡನೇ ಟೆಂಡರನ್ನು ತೆರೆಯಲಾಗುವುದು.
18. ಹೆಚ್ಚಿನ ಮಾಹಿತಿಯನ್ನು ಮತ್ತು ನಿಬಂಧನೆಗಳನ್ನು ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದು.

**(ಎಸ್.ಆರ್.ಉಮಾಶಂಕರ್ ಭಾ.ಆ.ಸೇ)**
**ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು**
**ನಗರಸಭೆ, ತುಮಕೂರು.**

**(ಅಬ್ದುಲ್ ಖಯ್ಯೂಂ ಕೆ.ಎಂ.ಎ.ಎಸ್.)**
**ಪೌರಾಯುಕ್ತರು**
**ನಗರಸಭೆ, ತುಮಕೂರು.**